International Journal of Kannada Research 2019; 5(4): 69-73




International Journal of Kannada Research
www.kannadajournal.com

**ISSN: 2454–5813**
IJKR 2019; 5(4): 69-73
© 2019 IJKR
www.kannadajournal.com
Received: 04-08-2019
Accepted: 06-09-2019

**ವಿದುಷಿ ಶ್ರೀಮತಿ ಸತ್ಯವತಿ** ಕೆ.ಆರ್
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ, ಲಲಿತಕಲಾ ಕಾಲೇಜ್ ,ಮಾನಸ ಗಂಗೋತ್ರಿ ಮೈಸೂರ್ ಯೂನಿವರ್ಸಿಟಿ ಮೈಸೂರು

**ಡಾ. ಕೆ. ಕುಮಾರ.**
ಪ್ರಾಧ್ಯಾಪಕರು ಮತ್ತು ನೃತ್ಯವಿಭಾಗಮುಕ್ಯಸ್ಥರು ಲಲಿತಕಲಾ ಕಾಲೇಜ್ ,ಮಾನಸ ಗಂಗೋತ್ರಿ ಮೈಸೂರ್ ಯೂನಿವರ್ಸಿಟಿ ಮೈಸೂರು

**Corresponding Author:**
**ವಿದುಷಿ ಶ್ರೀಮತಿ ಸತ್ಯವತಿ** ಕೆ.ಆರ್
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ, ಲಲಿತಕಲಾ ಕಾಲೇಜ್ ,ಮಾನಸ ಗಂಗೋತ್ರಿ ಮೈಸೂರ್ ಯೂನಿವರ್ಸಿಟಿ ಮೈಸೂರು

# ವರ್ಣಚಿತ್ರ ಪರಂಪರೆಯಲ್ಲಿ ನಾಯಕ–ನಾಯಿಕಾ ಭಾವ ಪ್ರತಿಪಾದನೆ

**ವಿದುಷಿ ಶ್ರೀಮತಿ ಸತ್ಯವತಿ ಕೆ.ಆರ್, ಡಾ. ಕೆ. ಕುಮಾರ.**

**ಸಾರಾಂಶ**
ಲಲಿತಕಲೆಗಳಲ್ಲಿ ಮಾನವ ನೇರವಾಗಿ ಭಾವನೆಗಳೊಂದಿಗೆ ತನ್ನ ಕಲ್ಪನಾ ಶಕ್ತಿಯ ಮೂಲಕ ಸಂವೇದನಾಶೀಲತೆ ಹಾಗೂ ಸೃಜನಾತ್ಮಕ ಅಭಿವ್ಯಕ್ತಿ ಗೊಂಡಿರುವ ಮಾಧ್ಯಮಗಳಲ್ಲಿ ಚಿತ್ರಗಳು ಒಂದು. ದೃಶ್ಯ ಹಾಗು ಶ್ರವ್ಯ ಎರಡು ವಿಧಗಳು. ಇವುಗಳಲ್ಲಿ ದೃಶ್ಯವೇ ಮೊದಲು ಮಾನವನ ಚಿತ್ತವನ್ನು ಮುಟ್ಟಿ ಅಭಯ ಚಕಿತ ನನ್ನಾಗಿ ಮಾಡಿದ್ದು. ತನ್ನ ಸುತ್ತಲ ಪ್ರಕೃತಿ ಸೌಂದರ್ಯ ರಮಣೀಯತೆ ಹೃದಯ ಕಲಕಿ, ಅವನಿಂದ ನಿರ್ಮಿಸಲ್ಪಟ್ಟ ಕಲಾಕೃತಿ , ರೇಕಚಿತ್ರ ಹಾಗು ಬಣ್ಣದ ಕಲಾಕೃತಿಗಳ ಬೆಳವಣಿಗೆಯ ಇತಿಹಾಸ ನಮ್ಮನು ಚಕಿತ ಗೊಳಿಸುತ್ತದೆ.
ಚಿತ್ರಗಳಲ್ಲೂ ಭಾವನೆಗಳಿವೆ, ಸಂವೇದನೆಗಳಿವೆ, ನವರಸಗಳ ಅನಾವರಣ ವಿದೆ ಎಂದು, ಸಂಗೀತ, ನಾಟ್ಯ ನಾಟಕಗಳನ್ನು ನೋಡಿದಾಗ ರಸಿಕನು ಅನುಭವಿಸುವ ಆನಂದ ಹೇಗೋ ಹಾಗೆ ಚಿತ್ರಗಳಲ್ಲು ರಸ ಭಾವನೆಗಳನ್ನೂ ಆಸ್ವಾದಿಸುವ ಮಟ್ಟಿಗೆ ವರ್ಣಚಿತ್ರ ಪರಂಪರೆ ಬೆಳೆದು ಸಾಗಿ ಬಂದಿದೆ. ಈ ಕುರಿತು ಕಿರು ಪರಿಚಯವನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

**ಕೀವರ್ಡ್ಸ್:** ಚಿತ್ರಕಲೆ, ಚಿತ್ರಕಲೆ ಮತ್ತು ಶೃಂಗಾರ, ಚಿತ್ರಕಲೆ ಮತ್ತು ಭಾವ, ನಾಯಕ–ನಾಯಕಿ ಮತ್ತು ಚಿತ್ರಕಲೆ, ವರ್ಣಚಿತ್ರ, ವರ್ಣಚಿತ್ರ ಪರಂಪರೆ.

## ಪೀಠಿಕೆ

ಚಿತ್ರಗಳು ಮಾನವನ ಭಾವನೆಯನ್ನು ನೇರವಾಗಿ ಸೃಜಿಸುವ ಮಾಧ್ಯಮ ರೇಖೆಗಳ ಮತ್ತು ವರ್ಣಗಳ ಮೂಲಕ ಯಾವುದೇ ವಿಷಯವನ್ನು ನಿವೇದಿಸುವಾಗ ಹೆಚ್ಚು ಸ್ಪಷ್ಟ ಮತ್ತು ಪರಿಣಾಮಕಾರಿಯಾಗಿ ಪ್ರತಿಬಿಂಬಿಸಬಹುದು. ಬೇರೆ ಶಿಷ್ಟ ಕಲೆಯ ಬೆಳವಣಿಗೆಗೆ ಮೊದಲು ಬಂಡೆಯ ಮೇಲೆ ಆದಿಮಾನವನು ತನ್ನ ಮನಸ್ಸಿನಾಳದ ಕಲ್ಪನೆಗಳನ್ನು ಗೆರೆಗಳಲ್ಲಿ ಕೊರೆದು, ಕೆಲವೇ ನೈಸರ್ಗಿಕ ವರ್ಣಗಳನ್ನು ಬಳಸಿ ಬಿಡಿಸಿಹೋದ ರೇಖಾಚಿತ್ರಗಳು ಇಂದು ಕಲಾ ಇತಿಹಾಸ ದೃಷ್ಟಿಯಲ್ಲಿ ಮಹತ್ವವಾಗಿದೆ. ಇಂದು ಈ ಪೂರ್ವ ಇತಿಹಾಸದ ಚಿತ್ರಕಲೆಗಳ ಅಧ್ಯಯನ ಕ್ಷೇತ್ರವನ್ನು 'ರಾಕ್ ಪೇಂಟಿಂಗ್ಸ್' ಎಂಬ ಹೆಸರಿನಲ್ಲಿ ಪ್ರಪಂಚದಾದ್ಯಂತ ಬೃಹತ್ ಪ್ರಮಾಣದಲ್ಲಿ ಸಂಶೋಧನೆಯನ್ನು ಕೈಕೊಳ್ಳಲಾಗುತ್ತಿದ್ದು, ಏಕವ್ಯಕ್ತಿಯ ಅಥವಾ ಸಮೂಹದಲ್ಲಿ ನರ್ತಿಸುವ ಅನೇಕ ರೇಖಾಚಿತ್ರಗಳು ಲಭ್ಯವಾಗಿದ್ದು ಮಾನವ ನಾಟ್ಯಕಲೆಯ ಚಲನೆಗಳ ಪ್ರಥಮ ದೃಶ್ಯಮಾಧ್ಯಮದ ದಾಖಲೆಯಾಗಿದೆ ಈ ಚಿತ್ರಗಳು.1
ಮಾನವ ತನ್ನ ಸುತ್ತಣ ಪ್ರಕೃತಿಯ ರಮಣೀಯತೆಯಿಂದ ಹೃದಯ ಕಲಕಿ ತನ್ನಿಂದ ನಿರ್ಮಿಸಲ್ಪಟ್ಟ ಕಲಾಕೃತಿಗಳಲ್ಲಿ ಆರಿಸಿಕೊಂಡ ಬಣ್ಣಗಳು, ಚಿತ್ರಿಸಲ್ಪಟ್ಟ ಭಂಗಿ ಅವುಗಳಲ್ಲಿ ಎಲ್ಲವೂ, ಆಲ್ತಮಿರ್ ಚಿತ್ರಗಳ ಮಟ್ಟಕ್ಕೆ ಬಾರದಿದ್ದರೂ ಚಿತ್ರಗಳಲ್ಲಿ ಅಭಿವ್ಯಕ್ತಿಗೊಂಡಿರುವ ಭಾವನೆಗಳು ನಿಜವಾಗಲೂ ನಮ್ಮನ್ನು ಆಶ್ಚರ್ಯಚಕಿತರನ್ನಾಗಿಸುತ್ತವೆ. ಆದಿಮಾನವ ಬಂಡೆಗಳ ಮೇಲೆ ಮಾನವ ಮತ್ತು ಪ್ರಾಣಿಗಳ ರೇಖಾಚಿತ್ರಗಳನ್ನು, ವಿವಿಧ ಚಲನೆಗಳನ್ನು ಚಿತ್ರಿಸಲಾಗಿದ್ದು, ನಂತರದ ಬೆಳವಣಿಗೆ ತನ್ನ ಮನೆಯ ಗೋಡೆಗಳನ್ನೇ ರೇಖಾಚಿತ್ರದ ವಿನ್ಯಾಸಗಳಿಂದ ಅಲಂಕರಿಸಿರುವುದು ನೋಡಿದರೆ ಚಿತ್ರಗಳನ್ನು ಬಿಡಿಸುವ

ಹವ್ಯಾಸ ಮಾನವನ ನಾಗರೀಕತೆಯ ಬೆಳವಣಿಗೆ ಜೊತೆಗೆ ಸಾಗಿ ಕೊನೆಗೆ ಅದು ಕಲೆಯ ಸ್ಥಾನವನ್ನು ಪಡೆಯಿತು ಎಂದು ತಿಳಿಯಬಹುದು. ಸಮಾಜದಲ್ಲಿ ಶಿಷ್ಟ ಆಚರಣೆ, ಸಂಪ್ರದಾಯ ಬೆಳೆದಂತೆ ಚಿತ್ರಕಲೆಯ ಬೆಳವಣಿಗೆಯಲ್ಲಿ ಹೆಚ್ಚಿನ ಕಲಾತ್ಮಕ ತತ್ವಗಳ ಸೇರ್ಪಡೆಯಾದವು. ಪ್ರಪಂಚದ ಎಲ್ಲ ಸಾಂಸ್ಕೃತಿಕ ಬೆಳವಣಿಗೆಯಲ್ಲೂ ಧಾರ್ಮಿಕ ತತ್ವ ವಿಧಿ ವಿಧಾನಗಳನ್ನು ಮತ್ತು ಧರ್ಮವನ್ನು ಪ್ರಚಾರಪಡಿಸಲು ಚಿತ್ರಕಲೆಯನ್ನು ಸಂವಹನ ಮಾಧ್ಯಮವಾಗಿ ಬಳಸಲಾಗಿದೆ. ದೇವಾಲಯಗಳಲ್ಲಿ ಅರಮನೆಗಳಲ್ಲಿ ಕಥಾಸಾಹಿತ್ಯವನ್ನು ವರ್ಣರಂಜಿತವಾಗಿ ಚಿತ್ರದ ಮೂಲಕ ರಚಿಸುವ ಪರಿಪಾಠವಿತ್ತು. ರಾಜಾಶ್ರಿತ ಕಲಾವಿದರು ಸಭೆಯ ಕಲಾಪಗಳನ್ನೂ, ನೃತ್ಯ ಪ್ರದರ್ಶನಗಳನ್ನೂ ರಾಜಮನೆತನದವರ ಭಾವಚಿತ್ರಗಳನ್ನೂ ಚಿತ್ರಿಸುವುದರ ಜೊತೆಗೆ ಅರಮನೆಯ ವಿವಿಧ ಭಾಗಗಳನ್ನು ವರ್ಣಚಿತ್ರಗಳಿಂದ ಶೃಂಗರಿಸತೊಡಗಿದರು. ಸಾಮಾನ್ಯವಾಗಿ ಭಿತ್ತಿಚಿತ್ರಗಳು ತಾಡಪತ್ರಗಳ ಮೇಲಿನ ಚಿತ್ರಗಳು ನಂತರ ಬಂದ ಬಟ್ಟೆ ಮತ್ತು ಕಾಗದದ ಮೇಲೆ ರಚಿಸುವ ಚಿತ್ರಗಳು ನಮಗೆ ಇತಿಹಾಸ ಸಮಯದ ಉದ್ದಕ್ಕೂ ದೊರೆಯುತ್ತಾ ಹೋಗುತ್ತದೆ. ಭಾರತೀಯ ಚಿತ್ರಕಲಾವಿದರಿಗೆ ಬಹುದೊಡ್ಡ ಪ್ರಮಾಣದಲ್ಲಿ ಚಿತ್ರ ರಚಿಸುವ ಅವಕಾಶ ದೊರೆತಿದ್ದು ಗುಹಾಂತರ ದೇವಾಲಯಗಳ ರಚನೆಯಿಂದಾಗಿ, ಒಳಗಿನ ಗೋಡೆ, ಕಂಬ, ಮೇಲ್ಛಾವಣಿಗಳು ಚಿತ್ರ ರಚಿಸುವಲ್ಲಿ ಆಧಾರಗಳಾದವು.2 ಚಿತ್ರಕಲೆಯ ತಂತ್ರ ಮತ್ತು ಪ್ರತಿಕ್ರಿಯ್ಲೆ, ವರ್ಣಗಳು, ಉಪಕರಣಗಳೂ, ಪದ್ಧತಿ ಮತ್ತು ಕಲಾವಿಮರ್ಶೆಯ ಸೂತ್ರಗಳು ಚಿತ್ರಕಲಾ ಗ್ರಂಥಗಳಿಗೆ ವಿಷಯವಾಗಿದೆ. ಭಾರತದಲ್ಲಿ ವಿಷ್ಣು ಧರ್ಮೋತ್ತರದ ಚಿತ್ರಸೂತ್ರವು ಒಂದು ಪ್ರಮಾಣಭೂತ ಗ್ರಂಥವಾಗಿದ್ದು, ನಾಟ್ಯಶಾಸ್ತ್ರದ ಸೂತ್ರಗಳು ಕ್ರೋಢೀಕರಿಸಿಕೊಂಡ ಕಾಲ ಅದು ಎನ್ನಬಹುದು. ಅತ್ಯಂತ ಪ್ರಾಚೀನ ಗ್ರಂಥವಾದ ವಿಷ್ಣುಧರ್ಮೋತ್ತರ ಪುರಾಣ ಚಿತ್ರ ಸೂತ್ರ ಅಧ್ಯಾಯವೇ ಈ ಚಿತ್ರಗಳ ನಿರ್ಮಾಣಕ್ಕೆ ಮೂಲಾಧಾರವಾಗಿದೆ. ಇದರಲ್ಲಿ ನೃತ್ಯ, ಸಂಗೀತ, ಛಂದಸ್ಸು ವ್ಯಾಕರಣ, ವಾಸ್ತುಶಿಲ್ಪ, ಶಿಲ್ಪಕಲೆ ಮೊದಲಾದ ಹಲವಾರು ವಿಷಯಗಳನ್ನೊಳಗೊಂಡಂತೆ ಚಿತ್ರಕಲೆ ಕೂಡ ಅಲ್ಲಿ ಸೇರಿಸಲ್ಪಟ್ಟಿವೆ.3 ವಿಷ್ಣು ಧರ್ಮೋತ್ತರವು ಹಂಸ, ಭದ್ರೆ, ಮೂಲವ್ಯ, ರುಚಕ ಮತ್ತು ಶಶಕ ಎಂಬ ಐದು ಬಗೆಯ ಪುರುಷರನ್ನು ಮತ್ತು ಅದಕ್ಕನುಗುಣವಾಗಿ ಐದು ಬಗೆಯ ಸ್ತ್ರೀಯರನ್ನು ವರ್ಣಿಸುತ್ತದೆ.

ಪಾರ ಮಾರ ದೊರೆ ಭೋಜನ ಸಮರಾಂಗಣ ಸೂತ್ರಧಾರವು ಚಿತ್ರಕಲೆಯನ್ನು ಕುರಿತ ಮತ್ತೊಂದು ಗ್ರಂಥ. ಆದರೆ ಅದರ ಮುಖ್ಯವಸ್ತು ವಾಸ್ತುಶಿಲ್ಪ. ಚಿತ್ರಗಳಲ್ಲಿ ಮೂಡಿಸಲ್ಪಡಬೇಕಾದ **ರಸ**ಗಳನ್ನು ವಿವರಿಸುವ ದೃಷ್ಟಿಯಿಂದ ಅದು ಚಿತ್ರಕಲೆಯನ್ನು ಕುರಿತ ಚಿಕ್ಕ ವಿಭಾಗವೊಂದನ್ನು ಹೊಂದಿದೆ. 18ನೇ ಶತಮಾನದ ಪಶ್ಚಿಮ ಚಾಲುಕ್ಯವಂಶದ ದೊರೆಯಾದ ಸೋಮೇಶ್ವರನ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ ಚಿತ್ರಕಲೆಯ ಬಗ್ಗೆ ಸ್ವಾರಸ್ಯಕರವಾದ ಒಂದು ಅಧ್ಯಾಯವಿದೆ. ನಾಟ್ಯ ಮಂಟಪದ ಅಲಂಕಾರದ ಸಂದರ್ಭದಲ್ಲಿ ಚಿತ್ರಕಲೆ ವಿವರಿಸಲ್ಪಟ್ಟಿದೆ. 16ನೆಯ ಶತಮಾನದ ಶ್ರೀಕುಮಾರನ ಗ್ರಂಥ ಶಿಲ್ಪರತ್ನದಲ್ಲಿ ಚಿತ್ರ ಲಕ್ಷಣವೆಂಬ ಹೆಸರಿನ ಚಿತ್ರಕಲೆಯನ್ನು ಕುರಿತ ವಿಭಾಗವೊಂದಿದೆ. ಅದು ಚಿತ್ರ, ಅರ್ಧಚಿತ್ರ ಮತ್ತು ಚಿತ್ರಭಾಷಾ ಎಂಬ ಮೂರು ಬಗೆಯ ಚಿತ್ರದ ವರ್ಗೀಕರಣಗಳನ್ನು ತಿಳಿಸುತ್ತದೆ ಹಾಗೂ ಚಿತ್ರಗಳನ್ನು ರಸಚಿತ್ರ ಮತ್ತು ಧೂಳೀಚಿತ್ರಗಳೆಂದು ವರ್ಗೀಕರಿಸಿದೆ.4 ಮೇಲಿನ ಗ್ರಂಥಗಳಲ್ಲಿ ಚಿತ್ರಕಲೆಯಲ್ಲಿ ರಸಗಳ ಬಗ್ಗೆ ಉಲ್ಲೇಖವಿದ್ದು ಎಲ್ಲಕ್ಕೂ ನಾಟ್ಯಶಾಸ್ತ್ರವೇ ಮೂಲಗ್ರಂಥವೆಂದು ಪರಿಗಣಿಸಬಹುದಾಗಿದೆ. ಚಿತ್ರಕಲೆಯ ಮೊದಲ ಉಲ್ಲೇಖಗಳು ನಾವು ರಾಮಾಯಣ ಮತ್ತ ಮಹಾಭಾರತಗಳಲ್ಲಿ ಕಾಣಿಸುವ ಚಿತ್ರಶಾಲೆಯ ಕುರಿತ ಉಲ್ಲೇಖಗಳೂ ಅಲ್ಲಿ ದೊರೆಯುತ್ತದೆ. ಅರಮನೆಯ ಚಿತ್ರಶಾಲೆಗಳು, ಸಾರ್ವಜನಿಕ ಚಿತ್ರಶಾಲೆಗಳು ಮತ್ತು ಖಾಸಗಿ ಮನೆಗಳಲ್ಲಿರುವ ಚಿತ್ರಶಾಲೆಗಳೆಂದು ಮೂರು ಬಗೆಯ ಚಿತ್ರಶಾಲೆಗಳನ್ನು ಗುರುತಿಸಲಾಗಿದೆ. ಮೊದಲನೆಯ ವರ್ಗದ ಚಿತ್ರಶಾಲೆಗಳು ಅಂತಃಪುರಕ್ಕೆ ಸಂಬಂಧಿಸಿದವು. ಕೆಲವು ರಾಜಕುಮಾರಿಯರು ತಮ್ಮ ಶಯನಾಗಾರಗಳನ್ನೇ ಚಿತ್ರಶಾಲೆಗಳನ್ನಾಗಿ ಪರಿವರ್ತಿಸಿದ್ದರು. ಸಾಮಾನ್ಯವಾಗಿ ಗಣಿಕೆಯರ ಮನೆಗಳಲ್ಲಿದ್ದಂಥ ಖಾಸಗಿ ಚಿತ್ರಶಾಲೆಗಳು ಅತ್ಯಂತ ಆಡಂಬರದಿಂದ ಕೂಡಿರುತ್ತಿದ್ದವು. ಇದು ಜಾರ (ವಿಟರ) ಸ್ತ್ರೀಲಂಪಟ (ಧೂರ್ತರ), ಭಟ್ಟಂಗಿ (ಚೇಟರ) ಗಣಿಕೆ (ವೇಶ್ಯೆಯರ) ಮತ್ತು ಕಾಮೋನ್ಮಾದಿ (ವೇಶ್ಯಾಕಾಮುಕ)ಗಳ ಕಾರ್ಯಕಲಾಪಗಳ ಸ್ಥಳವಾಗಿತ್ತು. ವೈವಿಧ್ಯಮಯ ಲಲಿತಕಲೆಗಳ ಭಂಡಾರವಾಗಿತ್ತು. ಅರಮನೆಯೂ ಸೇರಿದಂತೆ ಖಾಸಗಿ ಮನೆಯಲ್ಲಿ ಶೃಂಗಾರ, ಹಾಸ್ಯ, ಶಾಂತರಸಗಳಿಗೆ ಸಂಬಂಧಿಸಿದ ಚಿತ್ರಗಳು ಮಾತ್ರ ಇರುತ್ತಿದ್ದುವು. ಆದರೆ ದೇವಸ್ಥಾನ ಮತ್ತು ನೃತ್ಯ ಮಂದಿರಗಳಲ್ಲಿ ರಾಜರ ಅರಮನೆಗಳ ಸಾರ್ವಜನಿಕ ವಿಭಾಗಗಳಲ್ಲಿ ಎಲ್ಲ ಬಗೆಯ ಚಿತ್ರಗಳೂ ಇರುತ್ತಿದ್ದವು. ಆದ್ದರಿಂದ ಈ ಚಿತ್ರ ಶಾಲೆಗಳು ಹೆಚ್ಚಿನ ವೈವಿಧ್ಯತೆಯಿಂದ ಕೂಡಿರುತ್ತಿದ್ದವೆಂಬುದು ಸ್ಪಷ್ಟ.5

ಚಿತ್ರಕಲೆಯ ಷಡಂಗಗಳಲ್ಲಿ ರೂಪದರ್ಶಿತ್ವವನ್ನು ಮುಖ್ಯವಾದುದೆಂದು ಭಾವಿಸಲಾಗಿದೆ. ಅವು : ರೂಪಭೇದ (ರೂಪವೈವಿಧ್ಯ), ಪ್ರಮಾಣ (ಅನುಪಾತ), ಭಾವ–ಯೋಜನ (ಭಾವಗಳ ಸಮ್ಮಿಶ್ರಣ), ಲಾವಣ್ಯ–ಯೋಜನ (ಸೌಂದರ್ಯಸೃಷ್ಟಿ ಮತ್ತು ವಿವಿಧ ವರ್ಣ ಸ್ಫುರಣ) ಸಾದೃಶ್ಯ (ತದ್ರೂಪಚಿತ್ರಣ) ಮತ್ತು ವರ್ಣಿಕಾಭಂಗ (ಪ್ರತಿಕೃತಿಯ) ಪರಿಣಾಮವನ್ನು ಬೀರಲು ಬಣ್ಣಗಳ ಮಿಶ್ರಣ.

ಚಿತ್ರಗಳಿಂದ ಬಣ್ಣಗಳ ಮಿಲನ, ರೇಖೆ ಲಾಲಿತ್ಯ, ಸಾಮರಸ್ಯ ಮತ್ತು ಮನುಷ್ಯನ ದೈನಂದಿನ ಕ್ರಿಯೆಗಳನ್ನು ಸರಳವಾಗಿ ಹಾಗೂ ಅತ್ಯುತ್ತಮವಾಗಿ ರಚಿಸಬಹುದು. ಕ್ರಿಯಾತ್ಮಕ ಶಕ್ತಿಗೆ ಚಿತ್ರಕಲೆ ಒಂದು ಅಮೂಲ್ಯ ಆಧಾರ.6

**ಚಿತ್ರಕಲೆಯಲ್ಲಿ ರಸ ಮತ್ತು ನಾಯಕ–ನಾಯಿಕಾ ಭಾವಗಳು;**

ಚಿತ್ರಗಳ ವಿಷಯಕ್ಕೆ ಸಂಬಂಧಿಸಿದ ವಸ್ತುವನ್ನು ಕುರಿತ ಉಲ್ಲೇಖನಗಳು ಅಡಿಗಡಿಗೆ ಸಾಹಿತ್ಯ ಗ್ರಂಥಗಳಲ್ಲಿ ಕಂಡುಬರುತ್ತವೆ. ಭವಭೂತಿ, ಕಾಳಿದಾಸ, ಮತ್ತು ಇತರರಿಂದ ರಾಮಾಯಣದ ಹಲವು ದೃಶ್ಯಗಳು ವಿವರಿಸಲ್ಪಟ್ಟಿವೆ. ಇದೇ ರೀತಿಯಲ್ಲಿ ಚಿತ್ರಿಸಲ್ಪಟ್ಟಿರುವ ದಮಯಂತಿಯ ಜೀವನವು ಶ್ರೀಹರ್ಷನಿಂದ ವಿವರಿಸಲ್ಪಟ್ಟಿದೆ. ನೈಷಧ ಚರಿತವು ವಿಶೇಷವಾಗಿ ಚಿತ್ರ ಶಾಲೆಗಳಲ್ಲಿರುವ ಶೃಂಗಾರ ಚಿತ್ರಗಳನ್ನು ಸಾಕಷ್ಟು ವಿವರವಾಗಿ ವರ್ಣಿಸುತ್ತದೆ. ಋಷಿಗಳ ಪ್ರೇಮ ಮತ್ತು ದಿವ್ಯ ಅಪ್ಸರೆಯರೊಡನೆ ಅವರ ಪ್ರಣಯ ಮತ್ತು ಅದೇ ರೀತಿಯ ಇಂದ್ರನ ಪ್ರೇಮಲೀಲೆ ಇವು ನಳಮಹಾರಾಜನ ಮಹಾ ವೈಭವದ ಅರಮನೆಯ ಮನೋಜ್ಞವಾದ ಚಿತ್ರಗಳ ವಸ್ತುಗಳಾಗಿವೆ. ಚಿತ್ರಕಲೆಯಲ್ಲಿ ಉಳಿದುಬಂದಿರುವ ಸಮಕಾಲೀನ ಆಸ್ಥಾನ ದೃಶ್ಯಗಳು, ಪ್ರೇಮಿಗಳ ಭಾವಚಿತ್ರಣದ ಚಿತ್ರಗಳು, ಶೃಂಗಾರ ಚೇಷ್ಟೆಗಳು, ಋತುಗಳು, ಪ್ರತಿಮಾ ಲಕ್ಷಣಶಾಸ್ತ್ರದ ಚಿತ್ರಗಳು, ಅಲಂಕಾರದ ಮಾದರಿಯ ಆಶಯಗಳು ಮತ್ತು ಪ್ರಾಣಿ, ಪಕ್ಷಿಗಳ ಅಧ್ಯಯನ ಇವೆಲ್ಲವೂ ಮೊಘಲರ, ಪಹಾಡಿ ಮತ್ತು ರಾಜಾಸ್ಥಾನಿ ಪಂಥದವುಗಳಾಗಿ, ಸಮಕಾಲೀನ ಮತ್ತು ಇತ್ತೀಚಿನವೆನ್ನಿಸಿಕೊಂಡರೂ ಪ್ರಾಚೀನ ಪರಂಪರೆಯನ್ನು ಉಳಿಸಿಕೊಂಡಿರುವುದು ಸ್ಪಷ್ಟವಾಗಿದೆ. ವಿಶೇಷವಾಗಿ ರಾಜಾಸ್ಥಾನದ ಇತ್ತೀಚಿನ ಸೂಕ್ಷ್ಮಚಿತ್ರಗಳು, ಬಾರಾಮಾಸಾ ಚಿತ್ರಗಳು ಮತ್ತು ನಾಯಕರ ಮತ್ತು ನಾಯಕಿಯರ ಪ್ರೇಮವನ್ನು ಚಿತ್ರಿಸುವ ಚಿತ್ರಗಳು, ಶುಕ್ಲ ಅಥವಾ ಕೃಷ್ಣನ ಅಭಿಸಾರಿಕ, ಉತ್ಕಾಂಠ ಮತ್ತು

ವಿರಹದ ದೃಶ್ಯಗಳು ಮೋಡ ಕವಿದ ಆಕಾಶ ಅಥವಾ ಬೆಳದಿಂಗಳ ರಾತ್ರಿಯಲ್ಲಿ ವಿರಹ ವೇದನೆ ಅತ್ಯಂತ ಪ್ರಖರವಾಗಿರುವುದನ್ನು ಕುಂಚವು ಅತ್ಯಂತ ಧ್ವನಿಪೂರ್ಣವಾಗಿ ಚಿತ್ರಿಸಿದೆ.7

ಕ್ರಿ.ಪೂ. 100 ರಿಂದ ಕ್ರಿ.ಶ. 700 ಅಜಂತಾ ಚಿತ್ರ ರಚನೆಯು ಭಾರತದ ಸಂಸ್ಕೃತಿಯ ಪ್ರತೀಕ. ಅದರ ಶಾಖೆಯು ಗ್ವಾಲಿಯರ್ ರಾಜ್ಯದ ಬಾಗ್, ದಕ್ಷಿಣ ಭಾರತದ ಸಿತ್ತನವಾಸಲ್, ಸಿಂಹಳದ ಸಿಗೇರಿಯಾಕ್ಕೂ ವಿಸ್ತರಿಸಿತ್ತು. ವಿಶ್ವದ ಚಿತ್ರಕಲೆಯ ಇತಿಹಾಸದಲ್ಲಿ ಅಜಂತಾ ಚಿತ್ರಕ್ಕೆ ಗೌರವ ಸ್ಥಾನ ಇದೆ ಹಾಗೂ ಈ ಚಿತ್ರಗಳು ಭಾರತೀಯ ಚಿತ್ರ ಪರಂಪರೆಯಲ್ಲಿ ಸುವರ್ಣಯುಗವನ್ನು ನಿರ್ಮಿಸಿದೆ.8

ಕ್ರಿ.ಶ. 6 ರಿಂದ 8ನೇ ಶತಮಾನ – ಚಾಳುಕ್ಯರ ಆಳ್ವಿಕೆಯಲ್ಲಿ ಬಾದಾಮಿಯ ಚಿತ್ರಗಳ ಪಳೆಯುಳಿಕೆಗಳಲ್ಲಿ, ಚಿತ್ರಕಾರನ ಕಲೆಗೆ ಮಂಗಳೇಶನು ಮುಖ್ಯ ಆಶ್ರಯವಾಗಿದ್ದನೆಂಬುದನ್ನು ಸ್ಪಷ್ಟವಾಗಿ ಕಾಣಬಹುದು. ಒಂದು ದೊಡ್ಡ ಚಿತ್ರಪಟದಲ್ಲಿ ಅರಮನೆಯ ದೃಶ್ಯವೊಂದರ ಚಿತ್ರಣವಿದ್ದು ಅದರಲ್ಲಿ ಸಂಗೀತ, ನೃತ್ಯ ವೀಕ್ಷಿಸುತ್ತಿರುವ ವ್ಯಕ್ತಿ ಮಧ್ಯದಲ್ಲಿ ಕುಳಿತಿದ್ದು ಒಬ್ಬ 'ನರ್ತಕ' ಒಬ್ಬ 'ನರ್ತಕಿಯ' ಸುಂದರ ಚಿತ್ರಣವಿದೆ. ಆ ಶತಮಾನದಲ್ಲೇ ಒಬ್ಬ 'ನರ್ತಕ'ನ ಚಿತ್ರಣ ಬಿಡಿಸಿದ್ದಾರೆಂದರೆ ಪುರುಷರಿಗೂ ನಾಟ್ಯದಲ್ಲಿ ಪ್ರಾಧಾನ್ಯವಿತ್ತೆಂದೇ ಗಮನಿಸಬಹುದು.9

**ಮೊಗಲ ಚಿತ್ರಕಲೆ**

ಹದಿಮೂರನೇ ಶತಮಾನದ ಉತ್ತರಾರ್ಧದಲ್ಲಿ ಅಕ್ಬರನ ಆಳ್ವಿಕೆಯಲ್ಲಿ ಚಿತ್ರಕಲೆ ಉನ್ನತ ಸ್ಥಿತಿಗೇರಿತು ಜಹಾಂಗೀರನ ಕಾಲಕ್ಕೆ ಪರಮಾವಧಿಗೆ ಮುಟ್ಟಿತು ಎನ್ನಬಹುದು. ಜಹಾಂಗೀರನು ಚಿತ್ರಕಲಾ ಪೋಷಕನಾಗಿದ್ದನು. ಅವನ ಕಾಲದಲ್ಲಿ ಪ್ರಕೃತಿ ಸೌಂದರ್ಯ ಚಿತ್ರಣವು, ಒಂಟೆ ಕಾಳಗ, ಮೊಗಲ ಸುಂದರಿ ಮೊದಲಾವು ಪ್ರಸಿದ್ಧ ಚಿತ್ರಗಳು.

**ರಜಪೂತ ಚಿತ್ರಕಲೆ**

16ನೇ ಶತಮಾನದ ಉತ್ತರಾರ್ಧದಿಂದ 19ನೇ ಶತಮಾನದ ತನಕ ಚಿತ್ರಕಲೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇದಕ್ಕೆ ರಾಜಸ್ತಾನೀ ಶೈಲಿ ಎಂಬುದಾಗಿಯೂ ಹೇಳುತ್ತಾರೆ. ಏಕೆಂದರೆ ಇದರ ವಿಕಾಸವು ರಾಜ ಆಸ್ಥಾನದಲ್ಲಾಯಿತು. ಈ ಶೈಲಿಯು ಕ್ರಮೇಣ ದಕ್ಷಿಣ ಭಾರತದ ತಂಜಾವೂರು, ರಾಮೇಶ್ವರದ ತನಕವೂ ವಿಸ್ತರಿಸಿತು.

ರಜಪೂತ ಕಲೆಯಲ್ಲಿ 2 ಶಾಖೆಗಳು – ಒಂದು ಪಹಾಡೀಶೈಲಿ. ಇದು ಹಿಮಾಲಯ ಪರ್ವತಗಳ ಕೆಳಗಣ ಚಂಬಾ, ಬಸೋಲಿ, ಕಾಂಗ್ರಾ, ಜಮ್ಮುಗಳಲ್ಲಿ ಬಳಕೆಯಲ್ಲಿತ್ತು. ಮತ್ತೊಂದು ಜಯಪುರಶೈಲಿ. ಇದು ರಜಪೂತ ಕಲೆಗೆ ಕೇಂದ್ರವೆನಿಸಿತು. ರಜಪೂತ ಚಿತ್ರಕಲೆಯು ಭಾರತ ಮನೋಧರ್ಮವನ್ನು ಸಹಜವಾಗಿ ರೂಪಿಸಿದೆ. ಅಜಂತಾದಿಂದ ಅನುಗತವಾಗಿ ಬಂದು ಭಾರತದ ದೇಶೀಯ ಪರಂಪರೆಯ ಕಲೆಯಾಗಿದೆ. ರಜಪೂತ ಕಲೆಯಲ್ಲಿ ಹಿಂದೂಮತ ಸಂಬಂಧವಾದುವುಗಳು ಮತ್ತು ಜನರ ದೈನಂದಿನ ಜೀವನ ಹೇಗೆ ಮುಖ್ಯವಾದ ಪ್ರೇರಕ ಭಾವನೆಗಳು ಮೂಡಿಬರುವುದೋ, ಹಾಗೆಯೇ ರಾಜಾಸ್ಥಾನದ ಭಾವಗೀತಗಳಲ್ಲಿ ಮತ್ತು ಸಾಹಿತ್ಯದಲ್ಲಿ ಮೂಡಿಬಂದ ವಿಷಯಗಳನ್ನೇ ಈ ಚಿತ್ರಗಳು ಪ್ರತಿಬಿಂಬಿಸುತ್ತವೆ. ಪ್ರೇಮ ಮತ್ತು ಭಕ್ತಿಭಾವದ ನಿರೂಪಣೆ ಜಾಸ್ತಿ. ಮಾನವ ಪ್ರೇಮದ ಚಿತ್ರಣವು ರಜಪೂತ ಕಲೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ರಾಧಾಕೃಷ್ಣರ ಚಿತ್ರಗಳು ಹೆಚ್ಚು ಸಂಖ್ಯೆಯಲ್ಲಿ ಇವೆ. ಕಾವ್ಯದ ವರ್ಣನೆಗಳಲ್ಲಿ ಕಾಣುವ ಸ್ತ್ರೀಯರ ಆದರ್ಶ ಸೌಂದರ್ಯವು, ನಾಯಕ ನಾಯಿಕೆಯರ ಸರಸದ ವಿರಸದ, ಸಮಾಗಮದ, ಅಗಲುವಿಕೆಯ ಚಿತ್ರಗಳಿವೆ. ರಾಜಾಸ್ತಾನಿ ಶೈಲಿಯ ವಿಶೇಷ ವಿಕಾಸವು 'ರಾಗಮಾಲಾ' ಋತುವರ್ಣನೆ, ನಾಯಕ ನಾಯಿಕೆಯರು ಹಾಗೂ ಕೃಷ್ಣಚರಿತ್ರೆಗಳಾಗಿವೆ.10

**ರಾಗಮಾಲಾ ಚಿತ್ರಗಳು**

ರಾಗ, ರಾಗಿಣಿಮಾಲಾ ಚಿತ್ರಗಳು ಜಯಪುರದ ಚಿತ್ರಕಾರರು ಸಂಗೀತವನ್ನು ನೇತ್ರಾನಂದಕರವಾಗಿ ಮಾಡಿದ್ದಾರೆ. ಒಂದು ರಾಗ ಶ್ರಾವಕನ ಮನಸ್ಸಿನಲ್ಲಿ ಹುಟ್ಟಿಸುವ ಭಾವವನ್ನು ದೃಶ್ಯರೂಪವಾಗಿಡಲು ಈ ಚಿತ್ರಕಾರರು ಪ್ರಯತ್ನಿಸಿದ್ದಾರೆ. ಲಕ್ಷಣ ಶಾಸ್ತ್ರ ವಿವರಿಸುವ (ನಾಟ್ಯಶಾಸ್ತ್ರ) ಶೃಂಗಾರ ನಾಯಕರಾದ – ದಕ್ಷಿಣ, ಧೃಷ್ಟ, ಶಠ ಹಾಗೂ ಅನುಕೂಲ ನಾಯಕರನ್ನೂ, ಸ್ವೀಯೆ, ಅನ್ಯೆ, ಸಾಧಾರಣೆ ನಾಯಿಕೆಯರನ್ನೂ, ಅವರ ಸಹಾಯಕ, ಸಹಾಯಿಕೆಯರನ್ನೂ ಜೀವನಕ್ಕನ್ವಯಿಸಿ ಜಯಪುರ ಚಿತ್ರಕಾರರು ಚಿತ್ರಿಸಿದ್ದಾರೆ.11 'ರಾಗಮಾಲಾ' ಎಂದರೆ ಸಂಗೀತರಾಗಗಳ 'ಹಾರ' ಎಂದರ್ಥ. ಇದು ವಿಶ್ವದಲ್ಲೇ ಹೊಸ ಸಾಧನೆ. ಇನ್ನೆಲ್ಲಿಯೂ ಇಲ್ಲವೆನ್ನಬಹುದು. ಮನಸ್ಸಿನಲ್ಲಿ ರಸಭಾವಗಳನ್ನುಂಟು ಮಾಡುವುದರಲ್ಲಿ ಕೆಲವು ಬಣ್ಣ ಮತ್ತು ಧ್ವನಿಗಳಲ್ಲಿ ಸಮಾನಗುಣಗಳಿವೆ ಎಂಬುದನ್ನು ದೇಶ ವಿದೇಶಗಳಲ್ಲಿ ಆಧುನಿಕ ವಿಜ್ಞಾನಿಗಳು ಒಪ್ಪಿದ್ದು, ಯಾವ ವರ್ಣ ವಿನ್ಯಾಸಗಳು ಯಾವ ರಾಗ ಭಾವಗಳಿಗೆ ಸಮ ಎಂದು ತಿಳಿಸಲು ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ರಜಪೂತ ಚಿತ್ರಗಾರರು ರಾಮಾಯಣ, ಮಹಾಭಾರತ, ಭಾಗವತ, ಶೈವಪುರಾಣಗಳು, ವೈಷ್ಣವ ಪುರಾಣಗಳಿಂದ ವಸ್ತುಗಳನ್ನಾಯ್ದುಕೊಂಡದ್ದಲ್ಲದೆ ನಿತ್ಯ ಜೀವನವನ್ನೂ ಆಧಾರವಾಗಿಟ್ಟುಕೊಂಡು 'ರಸಭಾವಗಳನ್ನೂ' ರಾಗಗಳಿಗೆ ಅನುಗುಣವಾಗಿ ಶಾಸ್ತ್ರಾಧಾರವಾಗಿ ಇಟ್ಟುಕೊಂಡು ಭಾವನೆಗಳನ್ನುಂಟು ಮಾಡುವ ಪ್ರಯೋಗಗಳ ಚಿತ್ರಾಕೃತಿ ರಚಿಸಿದ್ದು 'ನಾಯಕ–ನಾಯಿಕಾ' ಭಾವದ ಚಿತ್ರಗಳೆಂದೇ ವಿಶಿಷ್ಟ ಸ್ಥಾನ ಪಡೆದಿದೆ.'12

ರಜಪೂತ ಚಿತ್ರಕಲೆಗಳ ಕೌಶಲ್ಯದ ಇನ್ನೊಂದು ಮರ್ಮವೇನೆಂದರೆ, ದೈವೀ ಮಾನವೀ ಭಾವಗಳ ಯುಕ್ತ ಸಂಯೋಗೀಕರಣ, ದೈವಿ ಮತ್ತು ಮಾನವಿ ಭಾವಗಳೆರಡನ್ನು ಸಮಾವೇಶಗೊಳಿಸುವ ಅವರ ದೃಷ್ಟಿ ಚಿತ್ರಕಲೆಗೇ ಒಂದು ನವೀನ ಮೌಲ್ಯತೆಯನ್ನು ತಂದುಕೊಟ್ಟಿದೆ. ಆ ಕಾಲದಲ್ಲಿ ಸನಾತನ ಧರ್ಮದ ಜೀವನದ ಲಹರಿಯೇ ಭಕ್ತಿಮಯವಾದದ್ದು. ಜನಸಾಮಾನ್ಯರ ಧಾರ್ಮಿಕ ಜೀವನದ ಪ್ರತಿಬಿಂಬವೆಂದರೆ ಅದು ಭಕ್ತಿಮಾರ್ಗದಲ್ಲಿ ತುಂಬಿದ್ದು ರಾಮದಾಸ, ಸೂರದಾಸ, ಕೃಷ್ಣದಾಸ, ಚೈತನ್ಯ, ಮೀರಾರವರ ಧಾರ್ಮಿಕ ವಿಚಾರಗಳು ಭಕ್ತಿರಾಜ್ಯದಲ್ಲಿ ತುಂಬಿತ್ತು. ವೈಷ್ಣವ ಪಂಥದವರಿಗೆ ಶ್ರೀಕೃಷ್ಣ ರಾಧೆಯರು ಅಂತರಂಗದಾರಾಧ್ಯ ದೇವತೆಗಳು; ಶೈವರಿಗೆ ಮಹಾದೇವ ಉಮೆಯರು. ಪಂಡಿತನಿಂದ ಪಾಮರತನಕ ಎಲ್ಲರೂ ಭಕ್ತಿಮಾರ್ಗದಲ್ಲಿ ಹೆಚ್ಚಾಗಿ ಅದು ಮಧುರಭಾವದ ಹಾದಿಯನ್ನು ಹಿಡಿದು ಪೂಜ್ಯತೆಯ ಭಾವದಲ್ಲಿ ಪರಮಾತ್ಮನ ಸಾನಿಧ್ಯವನ್ನು ಹೊಂದುವ ಸಮಾಜದ ನಿರ್ಮಾಣವಾದಂತಹ ಕಾಲವದು. ಈ ಚಿತ್ರಕಲೆಯಲ್ಲಿ ಅಧಿದೇವಿಯೇ ರಾಧೆಯೆನ್ನಬಹುದು. ದೇವನು ತನ್ನ ಪತಿಯೆಂದು ತಿಳಿದು ತೋರುವ ಭಕ್ತಿಯೇ ಈ ಮಧುರ ಭಾವ ರಾಧಾಕೃಷ್ಣರ ಪ್ರೇಮವೆಂದರೆ ಪರಮಾತ್ಮನ ಕಡೆಗೋಡುವ ಆತ್ಮದ ಪ್ರೇಮವಲ್ಲದೆ ಬೇರೆಯಲ್ಲ. ಶಿವ–ಉಮೆಯರ ಪ್ರೇಮಲಹರಿಯಾದರೂ ಶೈವರ ಪಾಲಿಗೆ ಪ್ರೇಮವಲ್ಲದೆ ಬೇರೆಯಲ್ಲ. ಇಂಥ ಭಕ್ತಿಭಾವದ ಅನೇಕ ಸ್ವರೂಪಗಳನ್ನು ಹಲವೊಂದು ಬಗೆಗಳಿಂದ ಬರೆದು, ತನ್ನಂತರಂಗದ, ಭಕ್ತಿಯನ್ನುಕ್ಕಿಸುವುದು ಚಿತ್ರಕಾರನ ಆದರ್ಶವೆನಿಸಿತ್ತು. ಆತ್ಮ ಪರಮಾತ್ಮರ ಪ್ರೇಮ, ವಿರಹ, ಮಿಲನ, ವಿಯೋಗ, ಸಂಯೋಗ ಇವುಗಳನ್ನು ಚಿತ್ರಿಸುವಾಗ ಬಹುಮಟ್ಟಿಗೆ ರಾಧಾಕೃಷ್ಣರ ಆಕೃತಿಗಳಿಂದಲೇ ನಿರೂಪಿಸುವರು. ಇವಕ್ಕೆಲ್ಲ 'ಶೃಂಗಾರ'ವೆಂದು ಹೆಸರು. ಇಂದಿನ ದಿನದಲ್ಲಿ ಶೃಂಗಾರವೆಂದರೆ ಮಾನವರ ಕಾಮಚೇಷ್ಟೆಯ ಸ್ಫುರಣವೆಂದೇ ಅರ್ಥ

ಬರುವುದು. ಆದರೆ ಭಕ್ತಿಮಾರ್ಗದಲ್ಲಿ ಗ್ರಹಿಸಿದ ಶೃಂಗಾರವು ಮನಸ್ಸನ್ನೂ ಬುದ್ಧಿಯನ್ನೂ, ಆತ್ಮವನ್ನೂ ಕಾಮದಿಂದ ಕಲುಷಿತವನ್ನಾಗಿ ಮಾಡುವ ಶೃಂಗಾರವಲ್ಲ. ಶೃಂಗಾರದ ಜೀವಾಳವು ಕಾಮದಲ್ಲಿಲ್ಲ. ಅದು ಪ್ರೇಮದಲ್ಲಿದೆ. ಹಿಂದಿನ ಭಾಗವತ, ಹರಿವಂಶಾದಿಗಳ ಶೃಂಗಾರದ ಮರ್ಮವು ಈ ಪ್ರೇಮಮಯ ಶೃಂಗಾರವೇ ಹೊರತು, ರವಿವರ್ಮನು 'ಗೋಪಿಕಾ ವಸ್ತ್ರಾಪಹರಣದಲ್ಲಿ' ತಂದಿಟ್ಟ ಉತ್ಥಾನ ಶೃಂಗಾರವಲ್ಲ ಎಂದು ಒಬ್ಬ ವೈಷ್ಣವ ಕವಿಯೆಂದಿರುವನು ಎಂದು ಭಾರತೀಯ ಚಿತ್ರಕಲೆಯಲ್ಲಿ ಡಾ॥ ಶಿವರಾಮ ಕಾರಂತ್‌ರವರು ಉಲ್ಲೇಖಿಸಿದ್ದಾರೆ.13

ಇನ್ನು ರಾಗಮಾಲಾ ಚಿತ್ರಗಳಲ್ಲಿ ಯಾವ ವರ್ಣ ವಿನ್ಯಾಸಗಳೂ ಯಾವ ರಾಗ ಭಾವಗಳಿಗೆ ಸಮ ಎಂದು ತಿಳಿಸಲು ಹಲವು ಪ್ರಯೋಗಗಳನ್ನು ಮಾಡಿದ್ದಾರಲ್ಲದೆ, ರಾಗಗಳಲ್ಲಿ ಹೆಚ್ಚು ಮೆಚ್ಚುಗೆಯ ಒಂದು ರಾಗವು. 'ಭೈರವಿ' ಆಗಿದೆ. ಇದರಲ್ಲಿ ಕನ್ಯೆಯೊಬ್ಬಳು ತನ್ನ ಪ್ರಿಯಕರನಿಗಾಗಿ ಧ್ಯಾನ ಮಗ್ನಳಾದಂತೆ ಚಿತ್ರಿಸಲಾಗಿದೆ. ರಾಜಾಸ್ತಾನಿ ಶೈಲಿಯ ಒಂದು ಭೈರವಿ ರಾಗಿಣಿಯ ಚಿತ್ರದಲ್ಲಿ ಒಬ್ಬ ಲಲನೆಯು ತನ್ನ ಪ್ರಿಯತಮನ ಪ್ರೇಮಪ್ರಾಪ್ತಿಗಾಗಿ ಮಂದಿರದಲ್ಲಿ ದೇವರ ಪೂಜೆ ಮಾಡುತ್ತಿದ್ದಾಳೆ. 'ವಸಂತ ರಾಗ'ವನ್ನು ಕೊಳಲನ್ನೂದುವ ಕೃಷ್ಣನು ಗೋಪಿಯರೊಡನೆ ವಿನೋದವಾಡುತ್ತಿರುವಂತೆ ಚಿತ್ರಿಸಲಾಗಿದೆ. ಮತ್ತೊಂದು ವಸಂತರಾಗ ಚಿತ್ರದಲ್ಲಿ ಮರಗಳೆಲ್ಲ ಹೂ ಬಿಟ್ಟಿವೆ. ಗೋಪಿಯರು ವಾದನಗಳನ್ನು ಬಾರಿಸುತ್ತಿದ್ದಾರೆ. ಶ್ರೀಕೃಷ್ಣನು ಸಂಭ್ರಮದಿಂದ ನಲಿಯುತ್ತಿದ್ದಾನೆ. ಒಟ್ಟಾರೆ ಈ ಚಿತ್ರಗಳಿಂದ ವಸಂತೋತ್ಸವದ ಸಂಭ್ರಮದ ಅರಿವು ನಮಗಾಗುತ್ತದೆ.

ಹೀಗೆ ಕೆಲವು ರಾಗಗಳು ಕೆಲವು ಪ್ರದೇಶಗಳಿಗೆ ಸಂಬಂಧಪಟ್ಟಿವೆ. ಉದಾಹರಣೆ 'ತೋಡಿ' ರಾಗದ ಹೆಸರು ದಕ್ಷಿಣ ಭಾರತದ ಒಂದು ಸ್ಥಳಕ್ಕೆ ಸಂಬಂಧಪಟ್ಟಿದೆ. ಮಾಳವ, ಗಾಂಧಾರ, ಗೌಡ, ಸಿಂಧು ಅಥವಾ ಸೈಂದವಿ, ಕರ್ನಾಟಕ ಮೊದಲಾದ ರಾಗಗಳಿವೆ. ವಸಂತ, ಶ್ರೀ ರಾಗಸಾರಂಗ, ಮೇಘ ಮಹ್ಲಾರ ಮೊದಲಾದುವುಗಳು ಋತುಗಳನ್ನೂ ಕಾಲಗಳನ್ನು ನಿರೂಪಿಸುವ ರಾಗಗಳಾಗಿವೆ. ಕೆಲವು ರಾಗರಾಗಿಣಿಯರಿಗೆ ಹಿಂದೂ ದೇವತೆಗಳ ಹೆಸರು ಕೊಡಲ್ಪಟ್ಟಿವೆ. ಉದಾ : ಭೈರವಿ, ಭೈರವ, ಸರಸ್ವತಿ, ಗೌರಿ, ಶಂಕರ, ಕೇದಾರ, ಮುಂತಾದವುಗಳು.

ಮಾಳವ ಕೌಶಿಕಾ (ಮಾಲಕಂಸ) ಪಟಮಂಜರಿ, ಭೂಪಾಳಿ, ಮೋಹನ, ತೋಡಿ ರಸಭಾವಗಳನ್ನು ಪ್ರತಿಬಿಂಬಿಸುತ್ತವೆ.

ಇದಲ್ಲದೆ ನಾಟ್ಯಶಾಸ್ತ್ರದಲ್ಲಿ ವಿವರಿಸಿರುವ ಕಾಂಭೋಜಿ ಅಷ್ಟ ನಾಯಕಿಯರಾದ ಸ್ವಾಧೀನಪತಿಕ, ವಾಸಕಸಜ್ಜಾ, ಕಲಹಾಂತರಿತ, ಖಂಡಿತ, ಪ್ರೋಷಿತ ಭತೃಕಾ, ವಿಪ್ರಲಬ್ಧ, ವಿರಹೋತ್ಕಂಠಿತ, ಅಭಿಸಾರಿಕಾ ಎಂಬ ಶೃಂಗಾರಕ್ಕೆ ಸಂಬಂಧಪಟ್ಟ ಎಂಟು ನಾಯಕಿಯರ ಚಿತ್ರಣವನ್ನು ಕಾಂಗ್ರಾ ಚಿತ್ರಗಾರರು ನಾಯಕ–ನಾಯಿಕಾ ಚಿತ್ರಗಳನ್ನು ಚಿತ್ರಿಸಿದ್ದಾರೆ. ಕೇಶವದಾಸರು ರಸಿಕ ಪ್ರಿಯಾ ಎಂಬ ಪ್ರೇಮಗೀತೆಗಳನ್ನು ರಚಿಸಿದ್ದು ಅದನ್ನೇ ರಾಧಾಕೃಷ್ಣರ ರೂಪದಲ್ಲಿ ನಾಯಕ–ನಾಯಿಕೆಯರನ್ನಾಗಿ ರೇಖೆ ಬಣ್ಣಗಳಲ್ಲಿ ಚಿತ್ರಿಸಿರುವುದು ಲಲಿತಕಾವ್ಯವಾಗಿದೆ.

ಹೀಗೆ ಒಂದು 'ರಾಗ' ಚಿತ್ರಗಾರನ ಮನಸ್ಸಿನ ಮೇಲೆ ಮೂಡುವ ಪರಿಣಾಮದ ಅನುಭವಕ್ಕೆ ಒಂದು ಮೂರ್ತ ಸ್ವರೂಪವನ್ನು ಅವನು ಕೊಡಲೆತ್ನಿಸುದುದೇ ರಾಗಮಾಲೆಯ ಉದ್ದೇಶ. ಒಂದೇ ರಾಗ ಬೇರೆ ಬೇರೆ ಚಿತ್ರಗಾರರ ಮೇಲೆ ಬೇರೆ ಬೇರೆ ಪರಿಣಾಮವನ್ನುಂಟುಮಾಡಬಹುದು. ಒಂದೇ ರಾಗದ ಹೆಸರಿನಲ್ಲಿ ವಿವಿಧ ಕಲ್ಪನೆಗಳು ಬಂದಿರುವುದನ್ನೂ ನಾವು ನೋಡಬಹುದು.14

ಹೀಗೆ ರಾಗ ಮಾಲಾ ಚಿತ್ರಗಳು ಸಂಗೀತ, ಸಾಹಿತ್ಯ ಮತ್ತು ಚಿತ್ರ ಈ ಮೂರನ್ನೂ ಒಂದಾಗಿಸಿರುತ್ತವೆ. ಪ್ರತಿಯೊಂದು ರಾಗ ಅಥವಾ ರಾಗಿಣಿಯು ಪ್ರೇಮ, ವಿರಹ, ವಾತ್ಸಲ್ಯ, ಸಂಭ್ರಮ ಮೊದಲಾದ ಯಾವುದಾದರೂ ರಸ ಭಾವವನ್ನು ಮೂಡಿಸುತ್ತದೆ, ಹಾಗೂ ಚಿತ್ರಗಳು ಪ್ರೇಕ್ಷಕರಲ್ಲಿ ಅದೇ ಮನೋಸ್ಥಿತಿಯನ್ನು ಉಂಟು ಮಾಡುತ್ತವೆ.

## ಕಾಂಗ್ರಾ ಚಿತ್ರಕಲೆ

ರಜಪೂತ ಚಿತ್ರಕಲೆಯ ಒಂದು ಓಜಸ್ವಿಯಾದ ಶಾಖೆಯು ಪಂಜಾಬದ ಕಡೆ ಇರುವ ಹಿಮಾಲಯ ಪ್ರದೇಶದ ಚಿಕ್ಕ ರಾಜ್ಯಗಳಲ್ಲಿ ಬೆಳಕಿಗೆ ಬಂತು. ಇಲ್ಲಿ ಗುಲೇರ, ನೂರ್ಪುರ, ತಿರಸು ಜನಪುರ ಮೊದಲಾದ ಸಂಸ್ಥಾನಗಳ ರಾಜರು ಚಿತ್ರಕಲೆಗೆ ವಿಶೇಷ ಪ್ರೋತ್ಸಾಹಗಳನಿತ್ತರು. ಈ ರಾಜ್ಯಗಳು ಕಾಂಗ್ರಾ ಕಣಿವೆಯ ಪ್ರದೇಶದಲ್ಲಿ ಇವೆ. ಅಲ್ಲಿ 'ಬಸೋಲಿ ಶೈಲಿ' ಎಂಬುದು ಬಳಕೆಯಲ್ಲಿತ್ತು. ನಂತರ 'ಕಾಂಗ್ರಾ ಶೈಲಿ' ಎಂದು ಹೆಸರಾಯಿತು. ಇದಕ್ಕೆ 'ಪಹಾಡೀ ಚಿತ್ರಕಲೆ' ಎಂದೂ ಕೂಡ ಹೇಳುತ್ತಾರೆ. ಹಿಂದಿಯಲ್ಲಿ ಪಹಾಡ್ ಎಂದರೆ ಪರ್ವತ. ಕಾಂಗ್ರಾ ಶೈಲಿಯು ಅಜಂತಾದಂತೆ ರೇಖಾಪ್ರಮುಖವಾದುದು. ಅದು ರೇಖಾಲಾಲಿತ್ಯ, ಅಲಂಕಾರ ವೈಖರಿ, ಸೂಕ್ಷ್ಮ ವಿವರಗಳೂ, ವರ್ಣಗಳ ಹೊಳಪು ಇವುಗಳಿಂದ ಖ್ಯಾತಿ ಹೊಂದಿದೆ. ರಾಜಾ ಸಂಸಾರಚಂದನು ಚಿತ್ರಕಲೆಗೆ ನೀಡಿದ ಪ್ರೋತ್ಸಾಹಗಳ ದೆಸೆಯಿಂದ ಇತಿಹಾಸದಲ್ಲಿ ಅವನು ಸ್ಥಾನ ಗಳಿಸಿದ್ದಾನೆಂದು ತಿಳಿದುಬಂದಿದೆ. ಆತನು ಕೃಷ್ಣಭಕ್ತನಾಗಿದ್ದು. ಚಿತ್ರಕಲಾ ಯೋಜನೆಯನ್ನು ಸಿದ್ಧಗೊಳಿಸಿ ಜಯದೇವನ ಗೀತಗೋವಿಂದ, ಕೇಶವ ದಾಸನ ರಸಿಕ ಪ್ರಿಯಾ, ಬಿಹಾರಿಯ ಸತಸಯಿೊ, ಭಾಗವತ ಪುರಾಣ, ಹರಿವಂಶ ಕತೆಗಳಿಗಾಗಿ ಚಿತ್ರರಚನೆ ಮಾಡಿಸಿದನು. ರಾಧಾಕೃಷ್ಣರ ವಿರಹ, ಪುನರ್ಮಿಲನ, ಸರಸ ಕೇಳಿ, ರಾಸಕ್ರೀಡೆ, ಕೃಷ್ಣನ ಗೋಪಾಲನೆ ಇವೆಲ್ಲವೂ ಚಿತ್ರಗಳಲ್ಲಿ ರಮ್ಯವಾಗಿ ಮೂಡಿ ಬಂದಿವೆ. ಚಿತ್ರಗಳಲ್ಲಿ ಶೃಂಗಾರ ರಸವೇ ಪ್ರಧಾನವಾಗಿರಲು ರಾಜನ ಮನೋಧರ್ಮವೂ ಕಾರಣವಾಗಿತ್ತು. ಕಾವ್ಯ ಓದಿದಾಗ ಮೂಡುವ ಭಾವನೆಗಳನ್ನು ಚಿತ್ರ ನೋಡಿದಾಗ ಸ್ಫುರಿಸುವಂತೆ ಮಾಡುವುದು ಇವರ ಗುರಿಯಾಗಿದ್ದು, ಈ ದಿಸೆಯಲ್ಲಿ ಕಾಂಗ್ರಾ ಕಲಾವಿದರು ಯಶಸ್ವಿಗಳಾಗಿದ್ದಾರೆ.15

## ಉಪಸಂಹಾರ

ಚಿತ್ರಕಲೆ ನೂರಾರು ದೇಶಗಳು, ನೂರಾರು ಕಾಲಗಳಲ್ಲಿ ಸೃಷ್ಟಿಗೊಳ್ಳುತ್ತಲೇ ಬಂದಿದೆ. ಶಿಲ್ಪಕ್ಕಿಂತಲೂ ಮೊದಲು ತಲೆಯೆತ್ತಿದ ಈ ಕಲೆ ನಾಗರಿಕತೆ ಕಾಣಿಸುವ ಮೊದಲೇ ಮನುಷ್ಯನ ಮನಸ್ಸನ್ನು ಆಕರ್ಷಿಸಿತ್ತು. ಇಪ್ಪತ್ತು ಮೂವತ್ತು ಸಾವಿರ ವರ್ಷಗಳ ಇತಿಹಾಸ ಅದರದ್ದು. ಆದರೆ, ಯಾವ ದೇಶವನ್ನು ನೋಡಿದರೂ, ಈ ದೀರ್ಘ ಇತಿಹಾಸದಲ್ಲಿ ಪ್ರತಿ ಸಾವಿರ ವರ್ಷದಲ್ಲಾಗಲೀ, ಶತಮಾನದಲ್ಲಾಗಲೀ ಅದು ಅಖಂಡವಾಗಿ ಬೆಳೆಯುತ್ತಾ, ಉಳಿಯತ್ತ ಬಂದಿದ್ದು ಚಿತ್ರಕಲೆಯ ಕೌಶಲ್ಯದ ಮರ್ಮವೆನ್ನಬಹುದು.

ಭಾರತದ ಅತ್ಯಂತ ಪ್ರಾಚೀನ ಚಿತ್ರ ಭಂಡಾರವು ಅಜಂತಾ, ಬಾಗ್ ಹಾಗೂ ಬಾದಾಮಿ ಗುಹೆಗಳಲ್ಲಿ ಇರುವಂಥವುಗಳು ಎಂದು ಸಾಮಾನ್ಯ ಅಭಿಪ್ರಾಯ. ಅದಕ್ಕಿಂತ ಹಿಂದಿನ ಕಾಲದ ಕೃತಿಗಳು ದೊರಕಿರುವುದಿಲ್ಲ. ಹಾಗೆಯೇ ಮಧ್ಯಪ್ರದೇಶದ ರಾಯಘಡದಲ್ಲೂ ವಿಂದ್ಯಪರ್ವತ ಮತ್ತು ಕೈಮೂರ ಶ್ರೇಣಿಯ ಗುಹೆಗಳಲ್ಲಿ ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯಲ್ಲೂ, ಪ್ರಾಚೀನವಾದ ಚಿತ್ರಗಳು ಕಂಡುಬರುತ್ತದೆ ಎಂದು ಚಿತ್ರಕಲೆಯ ಇತಿಹಾಸದಿಂದ ತಿಳಿದುಬಂದಿದೆ.

ಪ್ರಾಚೀನ ಕಾಲದ ಚಿತ್ರಕೃತಿಗಳು ನೋಡಲು ಸಿಗುವುದಿಲ್ಲ. ಆದರೆ ಚಿತ್ರಕಲೆಯು ಪ್ರಾಚೀನವೆನ್ನಲು ಆದಿಮಾನವನ ಕಾಲದಿಂದ ಹಿಡಿದು, ಸಿಂಧೂ ಕಣಿವೆಯ ಇತಿಹಾಸದಿಂದ ಅರಿಯಬಹುದು. ವೇದಗಳ ಕಾಲ ಹಾಗೂ ಪುರಾಣ ಕಾವ್ಯಗಳಲ್ಲಿ ಅದಕ್ಕೆ ಸಂಬಂಧಿಸಿದ ಅನೇಕ

ಕಥೆಗಳಿವೆ. ಚಿತ್ರಕಲೆ ಕುರಿತಾದ ಅತ್ಯಂತ ಪ್ರಾಚೀನ ಶಾಸ್ತ್ರಗ್ರಂಥವೆಂದರೆ ಚಿತ್ರಸೂತ್ರವೆಂದು ತಿಳಿದು ಬರುತ್ತದೆ. ಆದರೆ ಅದು ಈಗ ದೊರೆತಿಲ್ಲ. ಇನ್ನೊಂದು ಗ್ರಂಥ ವಿಷ್ಣು ಧರ್ಮೋತ್ತರಂ ಎಂಬುದು. ಅದರಲ್ಲಿ ಚಿತ್ರ ಸೂತ್ರಾಧ್ಯಾಯವಿದೆ. ಶಾಸ್ತ್ರಾನುಸಾರ ರಚಿಸಿದ ಚಿತ್ರವು ಧರ್ಮ, ಅರ್ಥ, ಕಾಮ, ಮೋಕ್ಷಾದಿ ಚತುರ್ವಿಧ ಪುರುಷಾರ್ಥಗಳನ್ನೀಯುವುದೆಂದು ಪ್ರಶಂಸೆ ಇದೆ. ಆ ಕಾಲದಲ್ಲಿ ಜನರು ನಿಷ್ಠೆಯಿಂದ ಚಿತ್ರಕಲೆಯ ಅಭ್ಯಾಸ ಮಾಡುತ್ತಿದ್ದರೆಂದೂ ಹೇಳಿದೆ. ಕ್ರಿ.ಶ. ಮೂರನೆಯ ಶತಮಾನದಲ್ಲಿ ವಾತ್ಸ್ಯಾಯನನು ಕಾಮಸೂತ್ರವೆಂಬ ಗ್ರಂಥದಲ್ಲೇ ಚಿತ್ರಕಲೆಗೆ ಷಡಂಗಗಳು ಎಂದರೆ ಆರು ಭಾಗಗಳುಂಟೆಂದು ಸೂತ್ರವನ್ನು ಸೂಚಿಸಿದ್ದಾನೆ.

ರೂಪಭೇದಾಃ ಪ್ರಮಾಣಾನಿ ಭಾವಲಾವಣ್ಯಯೋಜನಮ್।
ಸಾದೃಶ್ಯಂ ವರ್ಣಿಕಾಭಂಗಂ ಇತಿಚಿತ್ರಷಡಂಗಕಮ್ ॥

ಭಾರತೀಯ ಚಿತ್ರಕಾರರಿಗೆ ಈ ಷಡಂಗಗಳು ಮೂಲತತ್ವಗಳಾಗಿದ್ದವು. ಮತ್ಸ್ಯ ಪುರಾಣ, ಗರುಡ ಪುರಾಣ ಮೊದಲಾದವುಗಳಲ್ಲೂ, ಶ್ರೀಕುಮಾರನ ಶಿಲ್ಪರತ್ನ, ಭರತನ ನಾಟ್ಯಶಾಸ್ತ್ರ, ವಿಶ್ವಕರ್ಮ ಪ್ರಕಾಶ ಮೊದಲಾದ ಗ್ರಂಥಗಳಲ್ಲೂ ಚಿತ್ರಕಲೆಯ ವಿಚಾರ ಮತ್ತು ಪ್ರಶಂಸೆಗಳಿವೆ. ಭಾರತದ ಚಿತ್ರಕಲೆಯನ್ನು ಕಾಲಾನುಸಾರ ಪ್ರಾಚೀನಕಾಲ, ವೇದಕಾಲ, ಮೊಗಲರ ಕಾಲ, ಆಧುನಿಕ ಕಾಲ ಮೊದಲಾಗಿ ವಿಭಾಗಿಸಿ ಹೇಳಬಹುದು. ಮತಾನುಸಾರ ಹಿಂದೂ, ಮುಸ್ಲಿಂ, ಬೌದ್ಧ, ಜೈನಕಲೆ ಎಂದೂ ವಿಂಗಡಿಸಬಹುದು. ಹಾಗೆಯೇ ಭೌಗೋಳಿಕವಾಗಿಯೂ ವರ್ಗೀಕರಿಸಿ "ಚಿತ್ರದ ಶೈಲಿ" ಅಥವಾ ಚಿತ್ರಪದ್ಧತಿಯನ್ನು ತಜ್ಞರು ಪರಿಭೇದಗಳನ್ನು ಮಾಡಿ ವಿವಿಧ ಶೈಲಿಯ ಸೂಕ್ಷ್ಮತೆ ಹಾಗೂ ವೈಶಿಷ್ಟ್ಯಗಳನ್ನು ಗುರುತಿಸಿ ವಿಂಗಡಿಸಿರುವುದನ್ನು ತಿಳಿಯಬಹುದಾಗಿದೆ. ಚಿತ್ರಕಲೆ ನೂರಾರು ದೇಶಗಳು, ನೂರಾರು ಕಾಲಗಳಲ್ಲಿ ಸೃಷ್ಟಿಗೊಳ್ಳುತ್ತಲೇ ಬಂದಿದೆ. ನಾಟ್ಯಕಲೆಯಲ್ಲಿರುವಂತೆ ಸಮಭಂಗಿ, ಅಭಂಗ, ತ್ರಿಭಂಗ, ಅತಿಭಂಗಗಳು, ಮುದ್ರೆಗಳು ಹಾಗೂ ನವರಸಗಳಾದ ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಭೀಭತ್ಸ, ರೌದ್ರ ಶಾಂತಗಳೆಂಬ ನವರಸಗಳ ಮನೋಜ್ಞ ಚಿತ್ರ ಹಾಗೂ ಪ್ರೀತಿ, ಶಾಂತಿ, ಆನಂದ, ವಿನೋದಗಳು ಸೂಚಿಸುವ ಚಿತ್ರಗಳನ್ನೂ ಭಾರತೀಯ ಚಿತ್ರಕಲೆಯಲ್ಲಿ ರಚನೆಯಾಗಿದೆ. ನಾಟ್ಯ ಚಿತ್ರಗಳನ್ನು ಬರೆಯಲು ನರ್ತನವನ್ನು ಅರಿತಿರಬೇಕೆಂದು ಮಾರ್ಕಂಡೇಯನು ಹೇಳಿದ್ದಾನೆ. ನೃತ್ಯದಲ್ಲಿರುವಂತೆ ನವರಸಗಳಲ್ಲೊಂದಾದ 'ಶೃಂಗಾರ' ರಸಕ್ಕೆ ಸಂಭಂಧಪಟ್ಟಂತ ವಿರಹ ತಪ್ತ ಚಿತ್ರಗಳೂ, ಆದರ್ಶಪ್ರೇಮ ಹಾಗೂ 'ನಾಯಕ-ನಾಯಿಕಾ' ಭಾವದ ಚಿತ್ರಗಳೂ ವಿಶಿಷ್ಟ ಸ್ಥಾನ ಪಡೆದಿದೆ. ಜಯದೇವನ ಗೀತಗೋವಿಂದ ಕಾವ್ಯದ ಸನ್ನಿವೇಶವು ರಾಧಾ-ಕೃಷ್ಣರ ಪ್ರೇಮ ಮತ್ತು 'ವಿಪ್ರಲಂಭ ಶೃಂಗಾರ' ಕುರಿತ ಚಿತ್ರ-ಚರಿತ್ರೆಗಳಾಗಿವೆ. ಗೀತಗೋವಿಂದದಲ್ಲಿ 'ನಾಯಕ ನಾಯಿಕಾ'ಳ ಚಿತ್ರಣವು ಸುಪ್ರಸಿದ್ಧ. ಅವರನ್ನು ಕಿರುರೂಪ ಚಿತ್ರಗಳಾಗಿ ಅಷ್ಟನಾಯಿಕರಾದ ಸ್ವಾಧೀನಪತಿಕ, ವಿರಹೋತ್ಕಂಠಿತ, ಪ್ರೋಷಿತಪತಿಕೆ, ವಾಸಕಸಜ್ಜಾ, ವಿಪ್ರಲಬ್ಧೆ, ಖಂಡಿತಾ, ಅಭಿಸಾರಿಕಾ ಭಾವಗಳ ಚಿತ್ರಗಳು ಮನೋಜ್ಞವಾಗಿ ರಜಪೂತ ಚಿತ್ರ ಶೈಲಿಯಲ್ಲಿ ಮೂಡಿಬಂದಿದೆ. ಇದರಲ್ಲಿ ಶ್ರೀಕೃಷ್ಣನು ಶೃಂಗಾರ ನಾಯಕನಾಗಿ ದಕ್ಷಿಣ, ದೃಷ್ಟ, ಶಠ ಹಾಗೂ ಗೋಪಿಕಾವೃಂದದೊಂದಿಗೆ 'ರಾಸಕ್ರೀಡೆ'ಯಲ್ಲಿ ಮಗ್ನನಾದ ಚಿತ್ರವು ಜಗತ್ಪ್ರಸಿದ್ಧಿ ಪಡೆದಿದೆ. ಇದಲ್ಲದೆ ಕೇಶವದಾಸನು 'ರಸಿಕಪ್ರಿಯಾ' ಎಂಬ ಪ್ರೇಮಗೀತಗಳನ್ನು ರಚಿಸಿದ್ದು ಕಾಂಗ್ರಾ ಚಿತ್ರಗಾರರು ರೇಖೆ ಬಣ್ಣಗಳಲ್ಲಿ ರಾಧಾಕೃಷ್ಣರನ್ನೇ 'ನಾಯಕ-ನಾಯಿಕಾ'ರನ್ನಾಗಿಸಿ ಲಲಿತ ಕಾವ್ಯವಾಗಿ ಚಿತ್ರಗಳನ್ನು ಚಿತ್ರಿಸಿರುವುದು ಒಂದು ಅದ್ಭುತವೇ ಸರಿ!!!

ನೃತ್ಯ ಕಲೆಯಲ್ಲಿರುವಂತೆ ಚಿತ್ರಕಲೆಯಲ್ಲೂ ಪರಮಾತ್ಮನಲ್ಲಿ ಆತ್ಮನ ಭಕ್ತಿಯಂತೆ ಕೃಷ್ಣನಲ್ಲಿ ರಾಧೆಯ ಪ್ರೇಮವು ಉತ್ಕೃಷ್ಟವಾದದ್ದು, ಪರಮಾತ್ಮನು ಆತ್ಮನನ್ನು ಸ್ವಾಗತಿಸುವಂತೆ ಕೃಷ್ಣನು ರಾಧೆಯನ್ನು ಸ್ವೀಕರಿಸುತ್ತಾನೆ. ಇಲ್ಲಿಯೂ ಸಹ ರಾಧಾಕೃಷ್ಣರನ್ನು 'ಆತ್ಮ-ಪರಮಾತ್ಮರ' ಸಂಕೇತ ಸ್ವರೂಪರೆಂದು ಭಾವಿಸಿರುವುದು ಭಾಸವಾಗುತ್ತದೆ. ಭಾರತೀಯ ಕಲಾ ಪ್ರಪಂಚದಲ್ಲಿ ಎಲ್ಲಾ ಕಲೆಗಳ ಮೂಲ ಉದ್ದೇಶ ಒಂದೇ, "ಅದೇ ಪರಮಾತ್ಮನ ಸಾನಿಧ್ಯ ಹೊಂದುವುದೆ ಆತ್ಮದ ಪರಮಗುರಿ" ಎಂಬುದು.

**ಅಡಿ ಟಿಪ್ಪಣಿ**

1. 'ಶಿಲೆ-ಕಲೆ' - ಪುಟ - 221
2. ಪೂರ್ವೋಕ್ತ ಅದೇ - ಪುಟ - 222
3. ಭಾರತೀಯ ಚಿತ್ರಕಲೆ - ಪುಟ - 5
4. ಪೂರ್ವೋಕ್ತ ಅದೇ ಪುಟ - 6 ಮತ್ತು 7
5. ಪೂರ್ವೋಕ್ತ ಅದೇ ಪುಟ - 9 ಮತ್ತು 10
6. ಪೂರ್ವೋಕ್ತ ಅದೇ ಪುಟ - 2
7. ಪೂರ್ವೋಕ್ತ ಅದೇ ಪುಟ - 4 ಮತ್ತು 11
8. ಬಾಯರಿ ಃ.ಕ - ಪುಟ - 25
9. ಪಿ.ಆರ್. ತಿಪ್ಪೇಸ್ವಾಮಿ ಪೂರ್ವೋಕ್ತ-47
10. ಬಾಯರಿ ಃ.ಕ - ಪೂರ್ವೋಕ್ತ ಪುಟ - 59, 60, 61
11. ಚಿತ್ರಕಲೆ, ಅ.ನ.ಕೃ - ಪುಟ-27
12. ಬಾಯರಿ - ಪೂರ್ವೋಕ್ತ ಪುಟ - 67
13. ಡಾ॥ ಶಿವರಾಮ ಕಾರಂತ್ - ಪುಟ - 59 & 60
14. ಅ.ನ.ಕೃ ಪೂರ್ವೋಕ್ತ - ಪುಟ -71
15. ಬಾಯರಿ ಪೂರ್ವೋಕ್ತ - ಪುಟ -72, 74, 76

**ಗ್ರಂಥ ಋಣ**


1. 'ಶಿಲೆ-ಕಲೆ' ಕರ್ನಾಟಕ ನೃತ್ಯ - ಶಿಲ್ಪಗಳ ಸಾಂಸ್ಕೃತಿಕ ಅಧ್ಯಯನ ಡಾ. ಚೂಡಾಮಣಿ ನಂದಗೋಪಾಲ್ ಅಲ್ಪಾ ಪಬ್ಲಿಕೇಷನ್, ಬೆಂಗಳೂರು ಪ್ರ.ಮು-2011
2. 'ಭಾರತೀಯ ಚಿತ್ರಕಲೆ' ಸಿ. ಶಿವರಾಮಮೂರ್ತಿ ಅನು : ಪಿ.ಆರ್. ತಿಪ್ಪೇಸ್ವಾಮಿ ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ಹೊಸದೆಹಲಿ-16 ಪು.ಮು-1998
3. ಭಾರತೀಯ ಚಿತ್ರಕಲೆ ಸಂಕ್ಷಿಪ್ತ ಇತಿಹಾಸ ಲೇಖಕರು : ಬಾಯರಿ ಃ.ಕ ಪ್ರಕಾಶನ : ಸಮಾಚ ಪುಸ್ತಕಾಲಯ, ಧಾರವಾಡ (ಜಜಚಿಡಿ ಟಿಂಣ ಠಿಡಿಚಿಟಿಣಜಜ) ಕರ್ನಾಟಕ
4. ಚಿತ್ರಕಲೆ ಅ.ನ.ಕೃ ಸಾಗರ್ ಪ್ರಕಾಶನ, ಬನಶಂಕರಿ ಮೊದಲನೇ ಹಂತ, ಬೆಂಗಳೂರು, ಕರ್ನಾಟಕ.
5. ಭಾರತೀಯ ಚಿತ್ರಕಲೆ ಡಾ. ಶಿವರಾಮ ಕಾರಂತ್ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪ್ರ.ಮು-1930